

ಸೆಪಕ್ ಟಕ್ರಾ ಸೀತಾರಾಮ್ ಸಿಂಗ್



ವುಶು ಸೂರ್ಯಭಾನು ಪ್ರತಾಪ್–ಇಂಡೋನೇಷ್ಯದ ಅಬ್ದುಲ್ಲಾ




ಕುರಾಶ್

ಪ್ರಚಲಿತವಿರುವ ಈ ಆಟದಲ್ಲಿ ಭಾರತ ಪದಕ ಗೆದ್ದುಕೊಂಡಿದ್ದು ಇದೇ ಮೊದಲ ಬಾರಿ.

## ಹಳ್ಳಿಯ ಬಾಲಕಿ

ಕುರಾಶ್‌ನ 52 ಕೆ.ಜಿ. ಬಾಲಕಿಯರ ವಿಭಾಗದಲ್ಲಿ, ದೆಹಲಿ ಸಮೀಪದ ನೇಬಸರಾಯ್ ಗ್ರಾಮದ ಪಿಂಕಿ ಬಲ್ಹಾರ ಬೆಳ್ಳಿ ಗೆದ್ದರೆ, ಬೆಳಗಾವಿ ಗ್ರಾಮೀಣ ಪ್ರತಿಭೆ ಮಲಪ್ರಭಾ ಯಲ್ಲಪ್ಪ ಜಾಧವ್ ಕಂಚಿನ ಪದಕ ಗೆದ್ದರು. ನಾಲ್ವರನ್ನು ಸೋಲಿಸಿದ್ದ ಪಿಂಕಿ, ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಸುಲೇಮನೋವಾ ಎದುರು ಸೋತಿದ್ದಳು. ಮಲಪ್ರಭಾ, ಮೂವರು ಎದುರಾಳಿಗಳನ್ನು ಸೋಲಿಸಿ, ಸೆಮಿಫೈನಲ್‌ನಲ್ಲಿ ನಿರ್ಗಮಿಸಿದ್ದಳು. ಕುರಾಶ್ ಮತ್ತಿತರ ಕೆಲ ಆಟಗಳಲ್ಲಿ ಸೆಮಿಫೈನಲ್‌ವರೆಗೆ ಬಂದವರಿಗೆ ಕಂಚಿನ ಪದಕ ನೀಡಲಾಗುತ್ತಿದೆ.

ಭಾರತ ಕುರಾಶ್ ತಂಡದವರಿಗೆ ಕಿಟ್ ಹೊಂದಿಸಲೂ ದುಡ್ಡಿನ ಸಮಸ್ಯೆಯಾಗಿತ್ತು. ಎಂಟು ಬಾಲಕರು, ಆರು ಬಾಲಕಿಯರನ್ನು ಒಳಗೊಂಡ ತಂಡ ಏಷ್ಯನ್ ಕ್ರೀಡೆಗಳಿಗೆ ತೆರಳಿತ್ತು. ಇವರೆಲ್ಲ ಮೊದಲು ಜೂಡೊ ಕಲಿತು ನಂತರ ಕುರಾಶ್ ಅಭ್ಯಾಸ ಮಾಡಿದವರು. ಇದಕ್ಕೆ ಮೊದಲು 20 ದಿನಗಳ ತರಬೇತಿಗಾಗಿ ಉಜ್ಬೇಕಿಸ್ತಾನಕ್ಕೆ ಹೋಗಲೂ ದುಡ್ಡಿಗೆ ಪರದಾಡಬೇಕಾಯಿತು.

‘ಗ್ರಾಮಸ್ಥರು 1.75 ಲಕ್ಷ ರೂಪಾಯಿ ಚಂದಾ ಎತ್ತಿ ಉಜ್ಬೇಕಿಸ್ತಾನಕ್ಕೆ ಕಳುಹಿಸಲು ನೆರವಾಗಿದ್ದರು. ನನ್ನ ಯಶಸ್ಸಿನಲ್ಲಿ ಅವರ ಪಾತ್ರ ಹೆಚ್ಚು ಇದೆ’ ಎಂದು ಪದಕ ಗೆದ್ದ ನಂತರ ಪ್ರತಿಕ್ರಿಯಿಸುವಾಗ ಪಿಂಕಿ ಕಣ್ಣುತುಂಬಿ ಬಂದಿತ್ತು.

19 ವರ್ಷದ ಮಲಪ್ರಭಾ ಜಾಧವ ಬೆಳಗಾವಿ ಜಿಲ್ಲೆಯ ತುರಮುರಿ (ಮಹಾರಾಷ್ಟ್ರ ಗಡಿಯಲ್ಲಿದೆ) ಗ್ರಾಮದ ರೈತ ಕುಟುಂಬದಿಂದ ಬಂದವರು. 9 ವರ್ಷದಿಂದ ಜೂಡೊ ಅಭ್ಯಾಸ ಮಾಡುತ್ತಿದ್ದು, ಅದರಲ್ಲಿ ರಾಷ್ಟ್ರೀಯ ಚಾಂಪಿಯನ್ ಎನಿಸಿದವರು. ಈ ಸಾಧನೆಗೆ ‘ಏಕಲವ್ಯ’ ಪ್ರಶಸ್ತಿಯೂ ಬಂದಿತ್ತು. ಕಳೆದ ವರ್ಷ ಕುರಾಶ್‌ನಲ್ಲೂ ತೊಡಗಿದರು.

ಮಲಪ್ರಭಾ ಪದಕ ಗೆದ್ದುಕೊಂಡಿದ್ದು ಅನಿರೀಕ್ಷಿತವೇನೂ ಆಗಿರಲಿಲ್ಲ. ಪುಣೆಯಲ್ಲಿ ಎರಡು ತಿಂಗಳ ಹಿಂದೆ ನಡೆದ ಏಷ್ಯನ್ ಕುರಾಶ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಬಂದಿತ್ತು. ಅದಕ್ಕೂ ಮೊದಲು ಕಿರ್ಗಿಸ್ತಾನದಲ್ಲಿ ನಡೆದ ಇಂಡೊ–ಏಷ್ಯನ್ ಒಳಾಂಗಣ ಕೂಟದಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡಿದ್ದಳು ಎನ್ನುತ್ತಾರೆ ಈಕೆಯ ತರಬೇತುದಾರ ಜಿತೇಂದ್ರ ಸಿಂಗ್.

ಸೆಪಕ್ ಟಕ್ರಾದಲ್ಲಿ ಕಂಚಿನ ಪದಕ ಗೆದ್ದ ತಂಡದಲ್ಲಿರುವ ಹರೀಶ್ ಕುಮಾರ್ ದೆಹಲಿಯಲ್ಲಿ ಆಟೊ ಚಾಲಕ. ಸೆಪಕ್ ಟಕ್ರಾ ಮೇಲೆ ಬಹಳ ಪ್ರೀತಿ. ರಾಷ್ಟ್ರೀಯ ತಂಡಕ್ಕೆ ಬಂದರೆ ಏನಾದರೂ ಸಾಧಿಸಬಹುದೆಂಬ ಛಲದಿಂದ ನಿತ್ಯ ಅಭ್ಯಾಸ ನಡೆಸಿದವರು. ‘ಪದಕ ಗೆಲುವು ನನ್ನ ಕ್ರೀಡಾಜೀವನದ ಮಹೋನ್ನತ ಘಳಿಗೆ. ಈ ಕ್ರೀಡೆಗೆ ಇನ್ನಷ್ಟು ಜನಪ್ರಿಯತೆ ಸಿಗಬಹುದೆಂಬ ವಿಶ್ವಾಸ ನನ್ನದು’ ಎನ್ನುತ್ತಾರೆ ತಂಡದ  ಪ್ರಮುಖ ಹಾಗೂ ಕಿರಿಯ ಆಟಗಾರನಾಗಿರುವ ಹರೀಶ್.

ಕುರಾಶ್: ಮಧ್ಯ ಏಷ್ಯದ ಉಜ್ಬೆಕಿಸ್ತಾನದ ರಾಷ್ಟ್ರೀಯ ಕ್ರೀಡೆ ಇದು. ಬಹುತೇಕ ಜೂಡೊ ಮತ್ತು ಕುಸ್ತಿ ಮಿಶ್ರಣದಂತಿದೆ. ಆಟದಲ್ಲಿ ಬಳಸುವ ತಾಂತ್ರಿಕ ಪದಗಳು ಬೇರೆ ಬೇರೆ. ಜೂಡೊಕ್ಕೆ ಜಪಾನಿ ಪದಗಳು ಜಾಸ್ತಿ.

ಜೂಡೊದಲ್ಲಿ ಧರಿಸುವ ಉಡುಪು ಮಾದರಿಯನ್ನೇ ಕುರಾಶ್ ಪಟುಗಳೂ ಧರಿಸುತ್ತಾರೆ. ಒಬ್ಬ ಸ್ಪರ್ಧಿ ಹಸಿರು ಪೋಷಾಕು, ಎದುರಾಳಿ ನೀಲಿ ಪೋಷಾಕು ಧರಿಸಿರುತ್ತಾರೆ. ಜೂಡೊ, ಕುಸ್ತಿ ಆಡುವ ಪಟುಗಳು ಕುರಾಶ್ ಆಟದತ್ತ ಬರುತ್ತಿದ್ದಾರೆ. ಕುರಾಶ್ ಆಟದ ಅವಧಿ ಮೂರು ನಿಮಿಷ. ಫೈನಲ್ ಐದು ಸುತ್ತುಗಳನ್ನು ಹೊಂದಿರುತ್ತದೆ ಎಂದು ಭಾರತ ಜೂಡೊ ತಂಡದ ಕೋಚ್ ಜಿತೇಂದ್ರ ಸಿಂಗ್ ಹೇಳುತ್ತಾರೆ. ಬೆಳಗಾವಿಯಲ್ಲಿ ನೆಲೆಸಿರುವ ಜಿತೇಂದ್ರ ಸಿಂಗ್ 60 ಮಂದಿಗೆ ಜೂಡೊ ಜೊತೆಗೆ ಕುರಾಶ್‌ನಲ್ಲೂ ತರಬೇತಿ ನೀಡುತ್ತಿದ್ದಾರೆ.

ಪಾಯಿಂಟ್ ಆಧಾರದಲ್ಲಿ ವಿಜೇತನನ್ನು ನಿರ್ಧರಿಸಲಾಗುತ್ತದೆ. ಕುಸ್ತಿಯಲ್ಲಿ ‘ಚಿತ್’ ಆದಂತೆ ಇಲ್ಲೂ ಸ್ಪರ್ಧಿಯೊಬ್ಬ ಬೆನ್ನು ನೆಲಕ್ಕೆ ತಾಗಿ ಬಿದ್ದರೆ ಸೋತಂತೆ. ಈ ಆಟವನ್ನೂ ಮ್ಯಾಟ್ ಮೇಲೆ ಆಡಲಾಗುತ್ತದೆ.

ಭಾರತ ಒಲಿಂಪಿಕ್ ಸಂಸ್ಥೆ (ಐಒಎ), ಫುಟ್‌ಬಾಲ್ ತಂಡಕ್ಕೆ ಜಕಾರ್ತಾ ಕ್ರೀಡೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ನಿರಾಕರಿಸಿದಾಗ, ವುಶು, ಸೆಪಕ್ ಟಕ್ರಾದಂಥ ಆಟಕ್ಕೆ ಅವಕಾಶ ನೀಡಿದ್ದು ಎಷ್ಟು ಸರಿ ಎಂದು ಕೆಲವರು ವಾದಿಸಿದ್ದರು. ಹೀಗಾಗಿ ಪದಕ ಗೆಲ್ಲಲೇಬೇಕಾದ ಒತ್ತಡ ತಂಡದ ಮೇಲಿತ್ತು. ಈ ನಿಟ್ಟಿನಲ್ಲಿ ತಂಡ ನಿರಾಸೆ ಮೂಡಿಸಲಿಲ್ಲ. ಮುಂದಿನ ವರ್ಷಗಳಲ್ಲಿ ಈ ಕ್ರೀಡೆಗಳೂ ನಮಗೆ ಹೆಚ್ಚು ಪದಕಗಳನ್ನು ತಂದುಕೊಡುವ ನಿರೀಕ್ಷೆ ಮೂಡಿಸಿದೆ.